# ಬಿ.ಎಲ್. ವೇಣು



ಕತೆ, ಕಾದಂಬರಿ, ನಾಟಕಗಳನ್ನು ಬರೆದಿರುವ ವೇಣು ಸಾಹಿತ್ಯ ಮಾತ್ರವಲ್ಲ ಸಿನಿಮಾ ರಂಗದಲ್ಲೂ ಕೆಲಸ ಮಾಡಿದ್ದಾರೆ. ಕನ್ನಡ ಸಿನಿಮಾಗಳಿಗೆ ಕತೆ, ಚಿತ್ರಕತೆ, ಸಂಭಾಷಣೆ ಬರೆದಿರುವ ಅವರ ಹೆಸರು ಆ ರಂಗದಲ್ಲಿ ಚಿರಪರಿಚಿತ. ಅವರ ಐತಿಹಾಸಿಕ ಹಾಗೂ ಸಾಮಾಜಿಕ ಕಾದಂಬರಿಗಳು ಓದುಗ ವಲಯದಲ್ಲಿ ಪ್ರಸಿದ್ಧವಾಗಿವೆ.

ಅವರು ಬರೆದ ಮೊದಲ ನಾಟಕ 'ಯಮಲೋಕದಲ್ಲಿ ಮಾನವ' ನೂರಾರು ಪ್ರದರ್ಶನ ಕಂಡಿದೆ. 29 ಕಾದಂಬರಿಗಳು, 11 ಕಥಾಸಂಕಲನಗಳು, ಎಂಟು ಮಿನಿಕಾದಂಬರಿಗಳು, ನಾಲ್ಕು ನಾಟಕಗಳು, ನಾಲ್ಕು ಅಂಕಣ ಬರಹಗಳು, ಒಂದು ಆತ್ಮಕಥನ ಸೇರಿದಂತೆ 50ಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ. 'ಹಗಲುಕಗ್ಗೊಲೆ ಮಾನ್ಯ ರಾಜಾ ಮತ್ತಿ ತಿಮ್ಮಣ್ಣನಾಯಕ' ಎಂಬ ಐತಿಹಾಸಿಕ ಕಾದಂಬರಿ ಪ್ರಕಟಣೆಯ ಹಂತದಲ್ಲಿದೆ. ಅವರ ಹನ್ನೊಂದು ಕಾದಂಬರಿಗಳು ಚಲನಚಿತ್ರಗಳಾಗಿವೆ. 62 ಸಿನಿಮಾಗಳಿಗೆ ಸಂಭಾಷಣೆ ಬರೆದಿದ್ದಾರೆ. ಕನ್ನಡದ ಮುಂಚೂಣಿಯ ಸಿನಿ ನಿರ್ದೇಶಕರ ಜೊತೆಗೆ ಕೆಲಸ ಮಾಡಿದ ಹೆಗ್ಗಳಿಕೆ ಅವರದು.

ಅವರ ಕಾದಂಬರಿ ಆಧಾರಿತ, ಸಂಭಾಷಣೆಯನ್ನೂ ಅವರೇ ಬರೆದ 'ಪ್ರೇಮಪರ್ವ', 'ಪರಾಜಿತ', 'ಅಜೇಯ' ಸೇರಿದಂತೆ ಅನೇಕ ಸಿನಿಮಾಗಳು 100 ದಿನಗಳ ಪ್ರದರ್ಶನ ಕಂಡಿವೆ. ಅವರ ಚಿತ್ರಕತೆ, ಸಂಭಾಷಣೆ ಇರುವ 'ಒಲವಿನ ಉಡುಗೊರೆ' ಸಿನಿಮಾ 25 ವಾರಗಳ ಪ್ರದರ್ಶನ ಕಂಡಿತು. ಆರೋಗ್ಯ ಇಲಾಖೆಯಲ್ಲಿ ಕಚೇರಿ ಅಧೀಕ್ಷಕರಾಗಿ ಸೇವೆ ಸಲ್ಲಿಸಿದ ವೇಣು, ನಿವೃತ್ತಿಯ ಬಳಿಕ ತಮ್ಮ ಸ್ವಂತ ಊರು ಚಿತ್ರದುರ್ಗದಲ್ಲಿ ನೆಲೆಸಿದ್ದಾರೆ.

**ಬಂದೆ. 1976ರಲ್ಲಿ ನನ್ನ ಮೊದಲ ಕತೆ 'ಕನ್ನಡಪ್ರಭ'ದಲ್ಲಿ ಪ್ರಕಟವಾಗಿದೆಯೆಂದು ಗೆಳೆಯರು ಹೇಳಿದಾಗ ನನಗೇ ಅಚ್ಚರಿ, ರೋಮಾಂಚನ. ಕೂಡಲೇ ಪತ್ರಿಕೆಯನ್ನು ಕೊಂಡು ಗಬಗಬ ಓದಿದ ನೆನಪಿನ್ನೂ ಮಾಸಿಲ್ಲ. ಒಂತರಾ ಆತ್ಮವಿಶ್ವಾಸ. ಮತ್ತೆ ಕೂತು ಎರಡು ಕತೆಗಳನ್ನು ಬರೆದು 'ಸುಧಾ', 'ಮಯೂರ'ಕ್ಕೆ ಕಳುಹಿಸಿದೆ. ನಾಲ್ಕುವಾರಗಳಲ್ಲಿ ಸ್ವೀಕೃತಿ ಪತ್ರಗಳು ಬಂದು ಪುಳಕಗೊಳಿಸಿದವು. ಇವೇ ಪತ್ರಿಕೆಗಳಿಂದ ಇದುವರೆಗೂ ಕತೆಗಳ ಲಕೋಟೆಗಳು ಹಿಂದಿರುಗಿ ಬರುತ್ತಿದ್ದವು. 'ಲಹರಿ' ಎಂಬ ಕತೆ 'ಸುಧಾ'ದಲ್ಲಿ, 'ಧರ್ಮ' ಎಂಬ ಕತೆ 'ಮಯೂರ'ದಲ್ಲಿ ಪ್ರಪ್ರಥಮವಾಗಿ ಪ್ರಕಟವೂ ಆದವು. ಅಲ್ಲಿಂದ ನನ್ನಲ್ಲಿದ್ದ ಕತೆಗಾರ ಜಾಗೃತನಾದನೋ ಏನೋ. ನಾನು ಬರೆಯಲು ಆರಂಭಿಸಿದ ಕಾಲ ನವ್ಯಕತೆಗಳ ಕಾಲ. ಪತ್ರಿಕೆಗಳಲ್ಲಿ ಬಂದ ಕತೆಗಳನ್ನು**